ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶರಾವತಿ ಟೇಲ್‌ರೇಸ್ ಯೋಜನೆಗೆ ಈಗಾಗಲೇ ನಿರ್ವನೀಕರಣ ಮಾಡಿದ ಅರಣ್ಯ ಭೂಮಿಯ ವಿಸ್ತೀರ್ಣ ಎಷ್ಟು?

ಆ) ಇನ್ನೂ ನಿರ್ವನೀಕರಣ ಮಾಡಬೇಕಾಗಿರುವ ಅಂದಾಜು ಭೂಮಿಯ ವಿಸ್ತೀರ್ಣ ಎಷ್ಟು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಶರಾವತಿ ಟೇಲ್‌ರೇಸ್ ಯೋಜನೆಯಡಿಯಲ್ಲಿ ಇದುವರೆಗೂ 307.85 ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಮರಗಳ ಕಡಿತಲೆ ಕಾರ್ಯ ಕೈಗೊಂಡಿರುತ್ತದೆ.

ಆ) ಶರಾವತಿ ಟೇಲ್‌ರೇಸ್ ಯೋಜನೆಯಲ್ಲಿ ಒಟ್ಟು 700 ಹೆಕ್ಟೇರು ಅರಣ್ಯ ಭೂಮಿ ಬಿಡುಗಡೆಯಾಗಿದ್ದು ಇನ್ನೂ ಅಂದಾಜು 329.15 ಹೆಕ್ಟೇರು ಪ್ರದೇಶದಲ್ಲಿ ಮರಗಳ ಕಡಿತಲೆ ಕಾರ್ಯ ಕೈಗೊಳ್ಳಬೇಕಾಗಿದೆ.

ಕಾಗದ ಕಾರ್ಖಾನೆಗೆ ಬೇಕಾದ ನೀಲಗಿರಿ ನೆಡುತೋಪು

2923:(3908)

ಶ್ರೀ ಬಿ.ಎಸ್. ಯಡಿಯೂರಪ್ಪ, (ಶಿಕಾರಿಪುರ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಗದ ಕಾರ್ಖಾನೆಗೆ ಬೇಕಾದ ನೀಲಗಿರಿ ನೆಡುತೋಪು ಬೆಳೆಸಲು ಅರಣ್ಯ ನಾಶಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ ನಾಶ ಮಾಡಲಾದ ಅರಣ್ಯ ಜಮೀನಿನ ವಿಸ್ತೀರ್ಣವೆಷ್ಟು, ಆ ಪ್ರದೇಶಗಳು ಯಾವುವು ಹಾಗೂ ಈ ರೀತಿ ಅರಣ್ಯ ನಾಶ ಮಾಡಲು ನಿರ್ಧಾರ ತೆಗೆದುಕೊಂಡಿರುವುದರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಮೈ: ಎಂ.ಪಿ.ಎಂ. ಸಂಸ್ಥೆಯವರು ಅವರಿಗೆ ನೀಡಲಾದ ಕ್ಷೀಣತ ಅರಣ್ಯ ಪ್ರದೇಶ ಸಿ ಮತ್ತು ಡಿ ವರ್ಗದ ಪ್ರದೇಶಗಳನ್ನು ಸ್ವಾಭಾವಿಕ ಸಸ್ಯ ಸಂಕುಲಕ್ಕೆ ಹಾನಿಯಾಗದಂತೆ ಅರಣ್ಯೀಕರಣ ಕಾರ್ಯಕ್ಕೆ ಮಾತ್ರ ಉಪಯೋಗಿಸಿರುತ್ತಾರೆ.

ಆ) ಆದಾಗ್ಯೂ ಇದರ ಬಗ್ಗೆ ಕಾರ್ಯದರ್ಶಿ ಮಲೆನಾಡು ಜಾಗೃತ ಸಮುದಾಯ ಇವರು ಆಕ್ಷೇಪವೆತ್ತಿ, ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಲ್ಲಿಸಿ, ಮೊಕದ್ದಮೆ ಹೂಡಿದ್ದು ಮಾನ್ಯ ಉಚ್ಚ ನ್ಯಾಯಾಲಯದವರು ಇದರ ಬಗ್ಗೆ ಈಗಾಗಲೇ ಕೋರ್ಟ್ ಕಮಿಷನ್‌ನನ್ನು ನೇಮಿಸಿ ತನಿಖಾ ವರದಿ ಸಲ್ಲಿಸಲು ಆದೇಶಿಸಿದ್ದು, ಈ ಪ್ರಕರಣವು ನ್ಯಾಯಾಲಯದ ಮುಂದಿದೆ.

ಶಿಕಾರಿಪುರ ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿ.

2924::(3907)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಿಂದ ಶಿಕಾರಿಪುರ ತಾಲ್ಲೂಕಿನ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆ ದುರಸ್ತಿ ಕಾರ್ಯಕ್ಕೆ ಪ್ರತಿ ವರ್ಷ ಇಡಲಾದ ಅನುದಾನವೆಷ್ಟು?

ಆ) ಶಿಕಾರಿಪುರ ತಾಲ್ಲೂಕಿನಲ್ಲಿ 1995-96 1996-97 ಹಾಗೂ 1997-98ರಲ್ಲಿ ವಾರ್ಷಿಕ ರಿಪೇರಿ ಅನುದಾನದಲ್ಲಿ ಕ್ರಮವಾಗಿ ಪ್ರತಿ ವರ್ಷ ಕೈಗೊಂಡ ಕಾಮಗಾರಿಗಳ ವಿವರ ಹಾಗೂ ಇತರೇ ಅಂದಾಜು ವೆಚ್ಚವೆಷ್ಟು?

ಇ) ಪ್ರತಿ ವರ್ಷ ಪೂರೈಸಿದ ಕಾಮಗಾರಿಗಳಿಗೆ ಸರಕಾರದಿಂದ ಅದೇ ವರ್ಷ ಹಣ ಪಾವತಿ ಮಾಡಲಾಗಿದೆಯೇ; ಪಾವತಿ ಮಾಡದಿದ್ದಲ್ಲಿ ಕಾರಣವೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಯೋಗಿ ಸಚಿವರು):

ಅ) ಶಿಕಾರಿಪುರ ತಾಲ್ಲೂಕಿನಲ್ಲಿ 67.80 ಕಿಮೀ. ರಾಜ್ಯ ಹೆದ್ದಾರಿ ಹಾಗೂ 172.50 ಕಿಮಿ. ಜಿಲ್ಲಾ ಮುಖ್ಯ ರಸ್ತೆ ಇದ್ದು, ರಾಜ್ಯ ಹೆದ್ದಾರಿಗೆ 13.56 ಲಕ್ಷ ರೂ.ಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗೆ 25.88 ಲಕ್ಷ ರೂ.ಗಳಂತೆ, ದುರಸ್ತಿಗಾಗಿ ಪ್ರತಿ ವರ್ಷ ಇಡಲಾದ ಒಟ್ಟಾರೆ ಅನುದಾನ 39.44 ಲಕ್ಷ ರೂ.ಗಳು.

ಆ) ಶಿಕಾರಿಪುರ ತಾಲ್ಲೂಕಿನಲ್ಲಿ, 1995-96, 1996-97 ಹಾಗೂ 1997-98 ರಲ್ಲಿ ಎಲ್ಲಾ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಹಾಳಾದ ಭಾಗಗಳನ್ನು ವಾರ್ಷಿಕ ದುರಸ್ತಿ ಅನುದಾನದಲ್ಲಿ ದುರಸ್ತಿಗೊಳಿಸಲಾಗಿದೆ. ಒಟ್ಟು 183.72 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಇ) ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಡಿಯಲ್ಲಿ ಪ್ರತಿ ವರ್ಷದ ನಿಗಧಿತ ಅನುದಾನ:ಹಣ ಭರವಸೆ ಪತ್ರಕ್ಕೆ ಅನುಗುಣವಾಗಿ ಪಾವತಿ ಮಾಡಲಾಗಿದೆ.